THE KARNATAKA IMPROVEMENT BOARDS (AMENDMENT) BILL, 1985

Motion to Consider

SRI A. LAKSHMISAGAR (Minister for Law, Parliamentary Affairs and Urban Development, on behalf of Sri Ramakrishna Hegde, Chief Minister).—I move :

"That the Karnataka Improvement Boards (Amendment) Bill, 1985, be taken into consideration."

The question was proposed

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಇದು ಕರ್ನಾಟಕ ಅಭಿವೃದ್ಧಿ ಮಂಡಳಿಗಳ ಕಾಯಿದೆಗೆ ತಂದಿರತಕ್ಕ ತಿದ್ದುಪಡಿ. ಬಾಗಲಕೋಟೆ ಪ್ರದೇಶಕ್ಕೆ ಸಂಬಂಧಿಸಿದ ಒಂದು ತಿದ್ದುಪಡಿ ಮಸೂದೆ ಇದು. ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದೆ ಆಲ್ಮಟ್ಟಿ ಅಣೆಕಟ್ಟಿನ ಎತ್ತರ ೧೬೨೦ ಅಡಿ ಬಂದಾಗ ಮೊದಲನೆಯ ಹಂತದಲ್ಲಿ ಬಾಗಲಕೋಟೆ ನಗರ ಪ್ರದೇಶದ ಕೆಲವು ಭಾಗಗಳು ಮುಳುಗಿ ಹೋಗತಕ್ಕ ಸಂಭವವಿದೆ. ಆದನ್ನು ಗಮನದಲ್ಲಿಟ್ಟುಕೊಂಡು ಮುಳುಗಡೆಗೆ ಒಳಪಡತಕ್ಕ ಭಾಗಗಳನ್ನು ತೆಗೆದುಹಾಕಿ ಹೊಸ ನಗರವನ್ನು ಎತ್ತರವಾದ ಪ್ರದೇಶದಲ್ಲಿ ಕಟ್ಟುವುದಕ್ಕೆ ಅನುಕೂಲವಾಗುವಂತೆ ಕೆಲವು ಅಥಾರಿಟಿಗಳಿಗೆ ಅಧಿಕಾರವನ್ನು ಕೊಡತಕ್ಕ ವ್ಯವಸ್ಥೆಯನ್ನು ಇದರಲ್ಲಿ ಅಳವಡಿಸಲಾಗಿದೆ. ಇದರ ಪ್ರಕಾರ ಬಾಗಲಕೋಟೆ ಟೌನ್ ಡೆವಲಪ್‌ಮೆಂಟ್ ಅಥಾರಿಟಿ ಎಂದು ಒಂದು ಅಥಾರಿಟಿ ಇರುತ್ತದೆ. ಆಕ್ಷನ್ ಪ್ಲಾನ್ ಕಮಿಟಿ ಎಂದು ಒಂದು ಕಮಿಟಿ, ಹೈ ಲೆವೆಲ್ ರೆವ್ಯೂ ಕಮಿಟಿ ಎಂದು ಒಂದು ಕಮಿಟಿ ಇರುತ್ತದೆ. ಹೆಚ್ಚು ಮುಳುಗಡೆಯಾಗತಕ್ಕ ಬಾಗಲಕೋಟೆ ನಗರ ಪ್ರದೇಶವನ್ನು ಸ್ಥಳಾಂತರಿಸಿ ಎತ್ತರವಾದ ಜಾಗದಲ್ಲಿ ಹೊಸ ಊರನ್ನು ಕಟ್ಟುವ ವ್ಯವಸ್ಥೆಯನ್ನು ಜಾಗ್ರತೆಯಾಗಿ ಮಾಡಲು ಈ ಕಾನೂನನ್ನು ತಂದಿದ್ದೇವೆ. ಇದಕ್ಕೆ ಮಾನ್ಯ ಸದಸ್ಯರು ತಮ್ಮ ಸಂಪೂರ್ಣ ಒಮ್ಮತದ ಒಪ್ಪಿಗೆಯನ್ನು ಕೊಡಬೇಕೆಂದು ತಮ್ಮ ಮೂಲಕ ನಾನು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ಅಭಿವೃದ್ಧಿ ಮಂಡಳಿಗಳ ಕಾಯಿದೆಗೆ ತಂದಿರತಕ್ಕ ತಿದ್ದುಪಡಿ ಮಸೂದೆ ನೋಡುವುದಕ್ಕೆ ಬಹಳ ಸೊಗಸಾಗಿದೆ. ಉಪಯುಕ್ತವಾದ ಸೌಲಭ್ಯಗಳನ್ನು ಮಾಡಿಕೊಡಬೇಕೆಂಬ ಕಳಕಳಿಯನ್ನು ಮಾನ್ಯ ಮಂತ್ರಿಪರ್ಯಾರು ಸದನದ ಮುಂದೆ ವ್ಯಕ್ತಮಾಡಿದ್ದಾರೆ. ಆದರೆ ಇದಮ್ನು ವಿಚಾರ ಮಾಡಿ ನೋಡಿದರೆ ಸದ್ಯದ ಪರಿಸ್ಥಿತಿಯಲ್ಲಿ ಬಾಗಲ ಕೋಟೆಯ ಪರಿಸ್ಥಿತಿ ಗಂಭೀರವಾಗಿದೆ. ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳು ಅಲ್ಲಿಗೆ ಹೋದಾಗ ಈ ಬಗ್ಗೆ ಅನೇಕ ಆಶ್ವಾಸನೆಗಳನ್ನು ಕೊಟ್ಟರೂ ಸಹ ಬಾಗಲಕೋಟೆ ಮುಳುಗಿಹೋಗುವ ಪ್ರಸಂಗ ಇದೆ. ಹೆಚ್ಚು ಮಳೆ ಏನಾದರೂ ಆದರೆ ಮುಳುಗಿಹೋಗುತ್ತದೆ. ದುರ್ದೈವದಿಂದ ಯಾವುದೇ ತರಹದ ಸೌಲಭ್ಯಗಳನ್ನು ಅಲ್ಲಿನ ಜನತೆಗೆ ಕೊಟ್ಟಿಲ್ಲ. ಈ ಕಾನೂನಿಗೆ ಸಮರ್ಪಕವಾದ ವಿವರಣೆ ಕೊಟ್ಟಿಲ್ಲ. ಯಾವಯಾವ ಕೆಲಸಕಾರ್ಯಗಳನ್ನು ಕಾರ್ಯಾರಂಭ ಮಾಡುತ್ತಾರೆ ಎಂಬ ಬಗ್ಗೆ ಈ ಸದನಕ್ಕೆ ವಿವರ ಕೊಟ್ಟಿದ್ದರೆ ಮಂತ್ರಿಪರ್ಯಾರು ಬಹಳ ಶ್ಲಾಘನೀಯವಾದ ರೀತಿಯಿಂದ ನಮ್ಮ ಅಭಿನಂದನೆಗಳನ್ನು ಪಡೆಯುವುದಕ್ಕೆ ಸಮರ್ಥರಾಗುತ್ತಿದ್ದರು. ಆದರೆ ಆ ರೀತಿಯ ವಿವರಣೆ ಇಲ್ಲಿಲ್ಲ. ಬಾಗಲಕೋಟೆಯಲ್ಲಿ ಅನೇಕ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿದ್ದರೂ ಸಹ ಜಮೀನುದಾರರಿಗೆ ಹಣ ಮುಟ್ಟಿದೆ ನಡುವೆಯೇ ಹಣ ಪೋಲಾಗಿರುವ ವರದಿ ಇದೆ. ರೈತರು ಹೊಲ ಕಳೆದುಕೊಂಡಿದ್ದರೂ ಹಣ ಪಡೆದಿಲ್ಲ. ಮನೆ ಕಟ್ಟಿಸಿಕೊಡುತ್ತೇವೆಂದು ಸರ್ಕಾರದವರು ಹೇಳಿದ್ದರೂ ಕೂಡ ಯಾವುದೇ ರೀತಿಯ ಕಾವುಗಾರಿ ಗಳು ನಡದಿಲ್ಲ. ಕನ್ನಡಿಯಲ್ಲಿ ಗಂಟು ಇಟ್ಟು ನೋಡಿಕೊಳ್ಳುತ್ತಾ ಇರಿ ಎಂದು ಹೇಳುವ ರೀತಿಯಲ್ಲಿ ಬಾಗಲಕೋಟೆ ವಿಷಯ ನಡೆಯುತ್ತಿದೆ. ಕೇವಲ ಅಭಿವೃದ್ಧಿ ಮಂಡಳಿ ಮಾಡಿದ್ದಾರೆ ಎಂಬ ಒಂದೇ ಕಾರಣದಿಂದ ಸಮಾಧಾನಪಟ್ಟುಕೊಳ್ಳುವುದಕ್ಕಾಗುವುದಿಲ್ಲ. ಬಹಳ ಎಚ್ಚರದಿಂದ ಇದನ್ನು ಗಮನಿಸ ಬೇಕಾಗಿದೆ. ಈ ಕಾನೂನನ್ನು ಪಾಸ್ ಮಾಡಿಕೊಂಡರೂ ಎಷ್ಟು ಹಣವನ್ನು ಈ ದಿಸೆಯಲ್ಲಿ ಖರ್ಚು ಮಾಡುತ್ತಾರೆ, ಯಾವರೀತಿ ಖರ್ಚು ಮಾಡುತ್ತಾರೆ, ಪ್ರಗತಿ ಯಾವ ದಿಸೆಯಲ್ಲಿ ಆಗುತ್ತದೆ, ಕಾರ್ಯಾ

ರಂಭ ಎಷ್ಟು ದಿವಸದಲ್ಲಿ ಆಗುತ್ತದೆ ಎಂಬುದು ಅವಶ್ಯ. ಅಲ್ಲಿ ಉತ್ತಮವಾದ ಮನೆಗಳಿವೆ. ಅದೇ ರೀತಿ ಉತ್ತಮವಾದ ಮನೆಗಳನ್ನು ಕಟ್ಟುವುದಕ್ಕೆ ಈಗಿನ ಸರ್ಕಾರಕ್ಕೆ ಆಗುತ್ತದೆಯೋ ಇಲ್ಲವೋ ಹೇಳುವುದಕ್ಕಾಗುವುದಿಲ್ಲ. ಓವರ್‌ಡ್ರಾಫ್ಟ್ ಜಾಸ್ತಿಯಾಗಿರುವ ಈ ಸರ್ಕಾರಕ್ಕೆ ಮನೆ ಕಟ್ಟಿಕೊಡುವ ಶಕ್ತಿ ಇಲ್ಲ. ಆದರೂ ಈ ಕಾನೂನು ತಂದು ಸಾಹಸ ಮಾಡುತ್ತಿದ್ದಾರೆ. ಕಾನೂನು ತಂದಿದ್ದೇವೆ ಎಂದು ಜನತೆಗೆ ಹೇಳಿ ದ್ರೋಹ ಮಾಡುವುದು ಬೇಡ. ಜನತೆಯ ನಿಜವಾದ ಹಿತವನ್ನು ಗಮನಿಸಿ ಒಂದು ವರ್ಷದೊಳಗೆ ಅಥವಾ ಅದಕ್ಕಿಂತ ಮೊದಲು ಬೇರೆ ಎಲ್ಲಾ ಕಾಮಗಾರಿಗಳನ್ನು ಬಿಟ್ಟು ಮುಳುಗಿ ಹೋಗತಕ್ಕ ಪ್ರದೇಶದ ಜನರಿಗೆ ಅನುಕೂಲವಾಗುವಂತೆ ಟೌನ್‌ಷಿಪ್ ಮಾಡುವುದಕ್ಕೆ ಕ್ರಮ ತೆಗೆದು ಕೊಳ್ಳಬೇಕು. ಜಮೀನನ್ನು ಈಗಾಗಲೇ ಕಳೆದುಕೊಂಡವರಿಗೆ ಯೋಗ್ಯರೀತಿಯ ಜಮೀನನ್ನು ಕೊಡುವ ಬಗ್ಗೆ ಮಾನ್ಯ ಮಂತ್ರಿಗಳು ಈಗಾಗಲೇ ಆಶ್ವಾಸನೆ ಕೊಟ್ಟಿದ್ದಾರೆ ಅದೂ ಕನ್ನಡಿಯಲ್ಲಿನ ಗಂಟಿನಂತೆ ಕನ್ನಡಿಯಲ್ಲಿ ಉಳಿದಿದೆಯೇ ವಿನಹ ಜನರಿಗೆ ಮುಟ್ಟಿಲ್ಲ. ಆದ್ದರಿಂದ ಈ ಕಾನೂನನ್ನು ಜಾರಿಗೆ ತರುವಾಗ ಮಾನ್ಯ ಸಚಿವರು ಜನರಿಗೆ ಉಪಯುಕ್ತವಾದ ರೀತಿಯಲ್ಲಿ ನವೀಕರಣವಾದ ಟೌನ್‌ಷಿಪ್ ಮಾಡಬೇಕೆಂದು ಕೇಳಿಕೊಂಡು ಈ ಮಸೂದೆಯನ್ನು ಸ್ವಾಗತಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಆರ್. ವೆಂಕಟರಾಮಯ್ಯ.— (ಮುಳಬಾಗಿಲು) ಮಾನ್ಯ ಅಧ್ಯಕ್ಷರೆ, ಹೈ ಲೆವೆಲ್ ರೆವ್ಯೂ ಕಮಿಟಿಯಲ್ಲಿ ಸ್ಥಳೀಯ ಶಾಸಕರಿಲ್ಲ. ಮುನಿಸಿಪಲ್ ಪ್ರೆಸಿಡೆಂಟರಿಲ್ಲ. ಲೋಕಲ್ ರೆಪ್ರಸೆಂಟೇಷನ್ ಇಲ್ಲದೇ ಹೋದರೆ ಪ್ರಯೋಜನವಾಗುವುದಿಲ್ಲ. ಅಧಿಕಾರಿಗಳು ಬದಲಾವಣೆಯಾಗುತ್ತಾ ಇರುವುದರಿಂದ ಅವರಿಗೆ ಸಮಸ್ಯೆಗಳು ಗೊತ್ತಿರುವುದಿಲ್ಲ. ಹೀಗಾಗಿ ಕೆಲಸ ಕಾರ್ಯಗಳು ಸರಿಯಾಗಿ ಆಗದಿರುವ ಸಂದರ್ಭ ಇರುವುದರಿಂದ ಹೈಲೆವೆಲ್ ಕಮಿಟಿಯಲ್ಲಿ ಲೋಕಲ್ ಎಂ. ಎಲ್. ಎ. ಗಳಿರುವಂತೆ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಎಸ್. ಕೃಷ್ಣನ್.—ಹೈ ಲೆವೆಲ್ ರೆವ್ಯೂ ಕಮಿಟಿಯಲ್ಲಿ ಎಂ. ಎಲ್. ಎ. ಗಳಿದ್ದರೆ ಒಳ್ಳೆಯದು. ಅವರಿಗೆ ಸ್ಥಳೀಯ ಸಮಸ್ಯೆಗಳು ಗೊತ್ತಿರುತ್ತದೆ. ಅಧಿಕಾರಿಗಳು ಬದಲಾವಣೆಯಾಗುತ್ತಿರುವುದರಿಂದ ಲೋಕಲ್ ಎಂ. ಎಲ್. ಎ. ಗಳನ್ನು ಹೈ ಲೆವೆಲ್ ಕಮಿಟಿಯಲ್ಲಿ ಸೇರಿಸ ಬಹುದೆಂದು ಕಾಣುತ್ತದೆ.

ಶ್ರೀ ಜಿ. ವಿ. ಮಂಟೂರ್.—ಮಾನ್ಯ ಕೆ. ಎಚ್. ಪಾಟೀಲರು ಬಾಗಲಕೋಟೆ ಸಲುವಾಗಿ ತಂದಿರುವ ಮಸೂದೆಯನ್ನು ಸ್ವಾಗತಿಸಿರುವುದು ಆನಂದವೆನಿಸುತ್ತದೆ. ೧೯೬೨ರಲ್ಲಿ ಆಗಿನ ಮೈಸೂರು ನಾರಾಯಣಪುರ ಡ್ಯಾಮಿಗೆಲಾಲ್ ಬಹದೂರ್ ಶಾಸ್ತ್ರಿಯವರು ಫೌಂಡೇಷನ್ ಹಾಕಿದ್ದರು. ನಂತರ ಅಲ್ಲಿಂದ ಇಲ್ಲಿಯವರೆಗೆ ಕಾಂಗ್ರೆಸ್ ಸರ್ಕಾರ ನಮ್ಮ ರಾಜ್ಯದಲ್ಲಿ ಅಧಿಕಾರದಲ್ಲಿದ್ದು ಬಾಗಲಕೋಟೆ ಆಗಲು ಹೋಗುಗಳನ್ನು ಯಾರೂ ವಿಚಾರ ಮಾಡಲಿಲ್ಲ. ಜನತಾ ಸರ್ಕಾರ ಬಂದನಂತರ ರಾಮಕೃಷ್ಣ ಹೆಗಡೆಯವರು ಮುಖ್ಯ ಮಂತ್ರಿ ಗಳಾದ ಮೇಲೆ ಬಾಗಲಕೋಟೆಯಲ್ಲಿ ಹೊಸ ನಗರ ಕಟ್ಟುವ ಸಲುವಾಗಿ ಕ್ರಮ ತೆಗೆದುಕೊಂಡರು ಚೀಫ್ ಇಂಜನಿಯರ್, ಸೂಪರಿಂಟೆಂಡಿಂಗ್ ಇಂಜಿನಿಯರ್ ಎಲ್ಲ ಸಿಬ್ಬಂದಿಯನ್ನು ನೇಮಕ ಮಾಡಿ ಸಂಪೂರ್ಣ ೨೫೦೦ ಎಕರೆ ಜಮೀನನ್ನು ಈ ಕಾರ್ಯಕ್ಕಾಗಿ ತೆಗೆದುಕೊಳ್ಳುವ ನಿರ್ಧಾರ ಮಾಡಿದ್ದಾರೆ. ನಿಜವಾಗಿಯೂ ೧೯೬೨ನೇ ಇಸವಿಯಿಂದಲೂ ನೋಡಿದರೆ ಈ ಮನೆಯಲ್ಲಿ ಬಾಗಲಕೋಟೆ ಮುಳುಗಡೆ ವಿಷಯ ಬರುತ್ತಿದೆ. ಇದುವರೆಗೂ ಯಾವ ಶಾಸಕರೂ ಇದರ ಬಗ್ಗೆ ಏನನ್ನೂ ಮಾಡಿದಂತೆ ಕಾಣಾಲಿಲ್ಲ. ಈಗ ಈ ಬಿಲ್ಲಿನಲ್ಲಿ ಕೆಲವು ತಿದ್ದುಪಡಿಗಳನ್ನು ಸೂಚಿಸಿದ್ದಾರೆ.

ಶ್ರೀ ಮಲ್ಲಾರಿ ಗೌಡ ಎಸ್. ಪಾಟೀಲ್.—ಈ ಮನೆಯಲ್ಲಿ ಇಂದೆ ಈ ವಿಷಯದ ಬಗ್ಗೆ ಯಾರೂ ಏನನ್ನೂ ಹೇಳಿಲ್ಲವೆಂದು ಮಾನ್ಯ ಸದಸ್ಯರು ಆರೋಪ ಮಾಡುತ್ತಿದ್ದಾರೆ. ಅವರು ರೆಕಾರ್ಡ್ಸ್ ತೆಗೆಸಿ ನೋಡಿ ಹೇಳಲಿ, ದಯವಿಟ್ಟು ಆ ರೀತಿ ಅವರು ಮಾತನಾಡಬಾರದು.

ಶ್ರೀ ಜಿ. ವಿ. ಮಂಟೂರು.—ನಿಜವಾಗಿಯೂ ಸತ್ಯವನ್ನು ಹೇಳುತ್ತಿದ್ದೇನೆ.

ಶ್ರೀ ವೆಂಕಟರಾಮಯ್ಯ ಆರ್.—ಈ ಬಿಲ್‌ನಲ್ಲಿ ಸ್ಥಳೀಯ ವ್ಯಕ್ತಿಗಳಿಗೆ ಅವಕಾಶವಿಲ್ಲ. ದಯವಿ ಮಾಡಿ ಸ್ಥಳೀಯ ಮುನಿಸಿಪಲ್ ಪ್ರೆಸಿಡೆಂಟ್, ಎಂ. ಎಲ್. ಎ. ಎಂಪಿ ಇವರುಗಳನ್ನು ಇದರಲ್ಲಿ ಸೇರಿಸ ಬೇಕು.

ಶ್ರೀ ಜಿ. ವಿ. ಮಂಟೂರು.—ಹಿರಿಯ ಸಚಿವರಾದ ಶ್ರೀ ಎ. ಲಕ್ಷ್ಮೀಸಾಗರ್ ಅವರು ಬಾಗಲ ಕೋಟೆಗೆ ಬಂದಿದ್ದಾಗ ವಿಶೇಷವಾಗಿ ನಾವು ಅವರಿಗೆ ಸಾಕಷ್ಟು ಮನವಿಗಳನ್ನು ಕೊಟ್ಟಾಗ ಅವರೆ

ಸಹಸ್ತದಿಂದ ಸ್ವೀಕರಿಸಿದ್ದಾರೆ. ಈ ವಿಷಯದಲ್ಲಿ ಬಾಗಲಕೋಟೆ ತಾಲ್ಲೂಕಿನ ಹಳ್ಳಿಗಳಿಂದ ಸಾಕಷ್ಟು ಮನವಿಗಳನ್ನು ತಂದಂಕೊಟ್ಟರೂ ಕೂಡ ಅವಕ್ಕೆ ಯೋಗ್ಯ ಪರಿಹಾರ ಏನೂ ಸಿಗಲಿಲ್ಲ. ಅವರ ಪುನರ್ ವಸತಿ ಬಗ್ಗೆ, ಅಲ್ಲಿ ಸಾಧಾರಣ ಜೀವನವೂ ಕೂಡ ಸಾಧ್ಯವಿಲ್ಲವಾಗಿದೆ. ಶಾಲೆಗಳಲ್ಲ, ವಿದ್ಯುಚ್ಛಕ್ತಿಯಿಲ್ಲ. ನೀರಿಲ್ಲ–ಈ ರೀತಿ ಬೇಡಿಕೆಗಳಿವೆ. ದನಗಳೂ ಕೂಡ ಅಲ್ಲಿ ವಾಸ ಮಾಡುವುದಕ್ಕೆ ಶಕ್ಯವಿಲ್ಲವಾಗಿದೆ. ಪುನರ್ವಸತಿ ಕೇಂದ್ರಗಳನ್ನು ಮಾಡುವಾಗ ಈ ಎಲ್ಲಾ ಸಲಕರಣೆಗಳನ್ನೂ ಗಮನಿಸಿ ಜನರಿಗೆ ಉಪಯುಕ್ತವಾದ ರೀತಿಯಲ್ಲಿ ಯೋಜನೆಗಳನ್ನು ಕೈಗೊಂಡರೆ ಒಳ್ಳೆಯದೆಂದು ನನ್ನ ಭಾವನೆ.

ಶ್ರೀ ಎ. ಲಕ್ಷ್ಮೀಸಾಗರ್. (ನಗರಾಭಿವೃದ್ಧಿ ಹಾಗೂ ಕಾನೂನು ಮತ್ತು ಪಾರ್ಲಿಮೆಂಟರಿ ವ್ಯವಹಾರಗಳ ಸಚಿವರು). ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಶ್ರೀ ಕೆ. ಹೆಚ್. ಪಾಟೀಲರು ಬಾಗಲಕೋಟೆ ಮುಳುಗಡೆ ವಿಷಯದಲ್ಲಿ ಕೆಲವು ಸಂಶಯಗಳನ್ನು ವ್ಯಕ್ತಪಡಿಸಿದ್ದಾರೆ. ಅವರ ಸಂಶಯಗಳು ಅಷ್ಟು ಆಧಾರಪೂರಿತವಾಗಿವೆ ಎಂದು ನಾನು ಅಂದು ಕೊಂಡಿಲ್ಲ. ಅವರು ಹೀಗೆ ಮಾತನಾಡುವಾಗ ಒಳ್ಳೆಯ ಸಲಹೆ ಕೊಡತಕ್ಕ ರೀತಿಯಲ್ಲಿ ಹೇಳಿದ್ದಾರೆ ಅವರು ಹೇಳಿದ ಎಲ್ಲಾ ಅಭಿಪ್ರಾಯಗಳನ್ನೂ ಗಮನದಲ್ಲಿಟ್ಟು ಕೊಳ್ಳುತ್ತೇನೆ. ಈ ಯೋಜನೆಗೆ ಯಾವುದೇ ಬಾಧಕವಾದ ರೀತಿಯಲ್ಲಿ ಮುಳುಗಡೆ ಪ್ರದೇಶದ ಸಂತ್ರಸ್ತ ಜನರಿಗೆ ಅನುಕೂಲಗಳನ್ನು ಕಲ್ಪಿಸಿಕೊಡತಕ್ಕ ಕೆಲಸವನ್ನು ಸದರಿ ಕಮಿಟಿಯವರು ಮಾಡುವುದಕೆ ಬದ್ಧರಾಗಿರುತ್ತಾರೆ. ಈ ಕೆಲಸವನ್ನು ಬೇಗ ಮಾಡುವುದಕ್ಕೆ ಪ್ರಯತ್ನಿಸುತ್ತೇವೆನ್ನುವ ಭರವಸೆ ಕೊಡುತ್ತೇನೆ. ಮತ್ತೊಂದು ವಿಚಾರವನ್ನು ನಾನು ಹೇಳುವುದನ್ನು ಮರೆತುಬಿಟ್ಟೆ. Almatti dam is expected to reach the crest level of 1680 Ft. by July 1987. ಈ ಟೌನ್‌ಷಿಪ್ ಅನ್ನು ಬದಲಾಯಿಸಿ ಹೊಸ ಟೌನ್‌ಷಿಪ್ ಕಟ್ಟುವ ಕೆಲಸವಾಗಬೇಕಾಗಿದೆ. ಒಂದು ಸಲ ಬಾಗಲಕೋಟೆ ಜನರು ಮತ್ತು ಮುಳುಗಡೆ ಪ್ರದೇಶದ ಕೆಲವು ಜನರು ನನ್ನ ಹತ್ತಿರ ಬಂದಿದ್ದರು. ನಾನು ಪೂರ್ಣವಾಗಿ ವಿಚಾರ ಮಾಡಿದ್ದೇನೆ. ಕೆಲವರು ಕಾಂಪೆನ್‌ಸೇಷನ್ ಈಗಾಗಲೇ ತೆಗೆದು ಕೊಂಡಿದ್ದಾರೆ, ಪ್ರತಿಯೊಂದು ಭಾಗಕ್ಕೂ ಕಾಂಪನ್‌ಸೇಷನ್ ತೆಗೆದು ಕೊಂಡಿದ್ದಾರೆ. ೧೦೦ಕ್ಕೆ ೯೮ರಷ್ಟು ಜನ ಮುಳುಗಡೆ ಪ್ರದೇಶದಿಂದ ಪುನರ್ವಸತಿ ಕಾಲೋನಿಗೆ ಹೋಗಲು ಸಿದ್ಧವಾಗಿದ್ದಾರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ಇವರನ್ನು ತಪ್ಪಿಸುತ್ತಿದ್ದಾರೆ. ಅವರೆಲ್ಲರನ್ನೂ ಸಂತೈಸಿ ಯಾರಿಗೂ ತೊಂದರೆ ಇಲ್ಲದೆ ಇರತಕ್ಕ ರೀತಿಯಲ್ಲಿ ಕ್ರಮ ತೆಗೆದುಕೊಳ್ಳುತ್ತೇವೆ. ವರ್ಲ್ಡ್ ಬ್ಯಾಂಕ್‌ನಿಂದ ಈ ವಿಷಯಕ್ಕೆ ನಮಗೆ ಲೋನ್ ಸಿಗಬಹುದು ಅದು ಕಾರ್ಯಗತವಾಗಬಹುದು. ಆದರ ಪೂರ್ಣ ಲಾಭ ಅಪ್ಪರ್ ಕೃಷ್ಣ ಜನರಿಗೆ ಸಿಗಬೇಕೆನ್ನುವ ದೃಷ್ಟಿಯಲ್ಲಿ ಈ ಕಾನೂನನ್ನು ತಿದ್ದುಪಡಿ ಮಾಡಿ ತಂದಿದ್ದೇವೆ. ಮಾನ್ಯ ಸದಸ್ಯರು ಇದಕ್ಕೆ ಈಗಾಗಲೇ ಬೆಂಬಲ ಸೂಚಿಸಿದ್ದಾರೆ. ನಾನು ಅವರಿಗೆ ಕೃತಜ್ಞತೆಗಳನ್ನು ಸಲ್ಲಿಸಿ ಇದನ್ನು ಸರ್ವಾನುಮತದಿಂದ ಪಾಸು ಮಾಡಬೇಕೆಂದು ಸಭೆಗೆ ಮತ್ತೊಮ್ಮೆ ಮನವಿ ಮಾಡಿಕೊಳ್ಳುತ್ತೇನೆ

MR. SPEAKER.--The question is.

"That the Karnataka Improvements Boards (Amendment) Bill, 1985 be taken into consideration."

The Motion was adopted

Clause by Clause Consideration

CLAUSES 2 to 6

MR. SPEAKER.--The question is.

"That Clause 2 to 6 (both inclusive) do stand part of the Bill."

The motion was adopted

Clauses 2 to 6 both inclusive were added to the Bill.

CLAUSE 1 ETC

MR. SPEAKER.—The question is.

"That clause 1, the Long Title, the Preamble and the Enacting Formula do stand part of the Bill.

The motion was adopted

Clause 1, *the Long Title, the Preamble and the Enacting Formula were added to the Bill.*

Motion to Pass :

SRI A. LAKSHMISAGAR.—(Minister for Urban Development Law and Parliamentary Affairs) Sir,– I beg to move.

"That the Karnataka Improvement Boards (Amendment) Bill, 1985 be passed"

MR. SPEAKER.—The question is.

"That the Karnataka Improvement Boards Amendment) Bill, 1985 be passed."

The Motion was adopted and the Bill was passed

ಶ್ರೀ ಪಂಪಾಪತಿ.—ನೋ, ನೋ ಅನ್ನುವುದು ಹೋಗಲಿಲ್ಲ, ಹಾಗೆ ಹೇಳುವುದನ್ನು ಬಿಡಿ, ಕನ್ನಡ ಭಾಷೆ ಆಡಳಿತ ಭಾಷೆ ಎನ್ನುವುದನ್ನು ಮರೆಯಬೇಡಿ. ಇಂಗ್ಲೀಷ್ ಗಾಳಿ ನಿಮಗಿನ್ನು ಹೋಗಲಿಲ್ಲ.

ಅಧ್ಯಕ್ಷರು.—ನೋಡೋಣ, ಪ್ರಯತ್ನ ಮಾಡೋಣ.

ಶ್ರೀ ಪಂಪಾಪತಿ.—ನೋಡೋಣ, ಪ್ರಯತ್ನ ಮಾಡುತ್ತೇನೆ ಎಂದು ಹೇಳಿದರೆ ಹೇಗೆ ?

ಅಧ್ಯಕ್ಷರು.—ಆ ಭಾಷೆ ಮೊದಲು ಬಂದದ್ದು, ಹೊಸದಾಗಿ ನಾವೇನೂ ಮಾತನಾಡುತ್ತಿಲ್ಲ.

ಶ್ರೀ ಪಂಪಾಪತಿ.—ಎಲ್ಲವನ್ನೂ ಕನ್ನಡದಲ್ಲಿ ಮಾಡಬೇಕು.

ಶ್ರೀ ಎಂ. ರಾಮಪ್ಪ.—ಅಧ್ಯಕ್ಷರೇ, ಈ ರಾಜ್ಯದಲ್ಲಿ ಮೈನಾರಿಟಿ ಜನಾಂಗಕ್ಕೆ, ಮೈನಾರಿಟಿ ಭಾಷೆಗೆ ರಕ್ಷಣೆ ಕೊಡುವುದಿಲ್ಲವೆ? ನಾವೂ ನಮ್ಮ ಮಾತೃ ಭಾಷೆಯಲ್ಲಿ ಇಲ್ಲಿ ಮಾತನಾಡಲಿಕ್ಕೆ ಅವಕಾಶ ಇಲ್ಲವೇ? ಅದು ನಮ್ಮ ಹಕ್ಕು, ತಾವು ಬೇರೆ ಭಾಷೆಗಳಿಗೆ ಇಲ್ಲಿ ಅವಕಾಶ ಕೊಡಬೇಕು.

ಅಧ್ಯಕ್ಷರು.—ಆಲೋಚನೆ ಮಾಡೋಣ.

ಶ್ರೀ ಪಂಪಾಪತಿ.—ಕನ್ನಡ ಆಡಳಿತ ಭಾಷೆ ಎಂದು ಹೇಳಿದ ಮೇಲೆ ಎಲ್ಲಾ ವ್ಯವಹಾರವೂ ಕನ್ನಡದಲ್ಲಿ ನಡೆಯಬೇಕು. ಬರೀ ಹೇಳಿದರೆ ಏನು ಉಪಯೋಗ?

ಅಧ್ಯಕ್ಷರು.—ಕನ್ನಡ ಆಡಳಿತ ಭಾಷೆಯೆಂದು ಘೋಷಣೆಯಾದ ಮೇಲೆ ಅದು ಜಾರಿಯಲ್ಲಿ ಬರಲೇ ಬೇಕು, ಆದರೆ ಅದು ಏಕ್‌ದಂ ಆಗುವುದಿಲ್ಲ.

ಶ್ರೀ ಪಂಪಾಪತಿ.—ಆಂಧ್ರದಲ್ಲಿ ಕನ್ನಡ ಮಾತನಾಡುವುದಿಲ್ಲ, ತಮಿಳುನಾಡಿನಲ್ಲಿ ಕನ್ನಡ ಮಾತನಾಡುವುದಿಲ್ಲ. ಕನ್ನಡನಾಡಿನಲ್ಲಿ ಇಂಗ್ಲೀಷ್ ಏಕೆ ಬೇಕು?

ಶ್ರೀ ಪುಟ್ಟಸ್ವಾಮಿ ರತ್ನಾಕರ.—ಕನ್ನಡದಲ್ಲಿ ನೀವು ಕಾರ್ಯಕಲಾಪ ನಡೆಸಿಕೊಟ್ಟರೆ ಎಲ್ಲರಿಗೂ ಅರ್ಥವಾಗುತ್ತದೆ.

ಅಧ್ಯಕ್ಷರು.—ವಿಚಾರ ಮಾಡುತ್ತೇನೆಂದು ಹೇಳಿದ್ದೇನೆ.

ಶ್ರೀ ಪಂಪಾಪತಿ.—ಇದಂ ಕನ್ನಡದಲ್ಲೇ ಆಗಬೇಕು.

ಶ್ರೀ ಗೋಪಾಲ ಮಂಕಂದ ಕಾನಡೆ.—ಸರಿ, ಕನ್ನಡದಲ್ಲೇ ಎಲ್ಲವನ್ನೂ ಕಳುಹಿಸಿಕೊಡಿ, ಇಂಗ್ಲಿಷ್‌ನಲ್ಲಿ ನಮಗೆ ನಾಳೆಯಿಂದ ಕಳುಹಿಸಬೇಡಿ.

ಅಧ್ಯಕ್ಷರು.—ವಿಚಾರ ಮಾಡುತ್ತೇವೆಂದು ಹೇಳಿದ್ದೇವೆ, ಈಗ ತಾವು ಕುಳಿತುಕೊಳ್ಳಿ.

ಅಧ್ಯಕ್ಷರು.—ಬೆಳಿಗ್ಗೆ ಮಾನ್ಯ ಎಸ್.ಆರ್. ಲಕ್ಷ್ಮಯ್ಯ ಅವರು ಮಾತನಾಡುವಾಗ ಒಂದು ವಾಕ್ಯವನ್ನು ಉಪಯೋಗಿಸಿದ್ದರ ಬಗ್ಗೆ ಸದಸ್ಯರು ಆಕ್ಷೇಪವನ್ನು ಎತ್ತಿದ್ದು, ಆ ಬಗ್ಗೆ ವರದಿ ತರಿಸಿ ನೋಡುತ್ತೇನೆಂದು ಹೇಳಿದ್ದೆ. ಹಾಗೂ ಆ ಬಗ್ಗೆ ವರದಿ ತರಿಸಿದ್ದು ಅವರು ಈ ರೀತಿ ಹೇಳಿದ್ದಾರೆ.

"ನೀವು ಅಧಿಕಾರದಲ್ಲಿದ್ದಾಗ ಕಾಫಿ ಪ್ಲಾಂಟರ್ ಕಡೆಯಿಂದ ಎಷ್ಟೆಷ್ಟು ಹಣವನ್ನು ಕಲೆಕ್ಟ್ ಮಾಡಿಕೊಂಡಿದ್ದೀರಿ ಎನ್ನುವ ಬಗ್ಗೆ ಅಂಕಿ-ಅಂಶಗಳನ್ನು ಕೊಡುತ್ತೇನೆ."

ಇದರ ಉದ್ದೇಶ ಏನೇ ಇದ್ದರೂ ಕೂಡಾ, ಯಾರ ಮೇಲೇ ಇದ್ದರು ಈ ಸದನದ ಎರಡೂ ಕಡೆಯ ಸದಸ್ಯರು ಈ ರೀತಿ ಅಲಿಗೇಷನ್ ಮಾಡುವುದು ಸರಿಯಲ್ಲ ಆ ವಿಷಯವನ್ನು ಬೇಕಾದರೆ ಲೋಕ ಆಯುಕ್ತರ ಮುಂದೆ ಇಟ್ಟು ಚರ್ಚೆ ಮಾಡಲಿ ಆದ್ದರಿಂದ ನಾನು ಆ ವಾಕ್ಯವನ್ನು ಎಕ್ಸ್‌ಪಂಜ್ ಮಾಡುತ್ತೇನೆ.

ಶ್ರೀ ಕೆ.ಎಚ್. ಶ್ರೀನಿವಾಸ್.—ಒಂದು ಸಂದರ್ಭದಲ್ಲಿ ಮಾನ್ಯ ವಿರೋಧ ಪಕ್ಷದ ನಾಯಕರು ಸಭೆಯಲ್ಲಿ ಇರಲಿಲ್ಲ. ಕಂದಾಯ ಸಚಿವರು ಉತ್ತರ ಕೊಡುವಾಗ ಅವರ ಬಗ್ಗೆಯೂ ಕೂಡಾ ಕೆಲವು ವಿಷಯಗಳ ಬಗ್ಗೆ ಆಪಾದನೆ ಮಾಡಿದ್ದಾರೆ. ಅದನ್ನೂ ಸಹಾ ನೀವು ನೋಡಿ ಅದಕ್ಕೆ ಉತ್ತರ ಕೊಡುವುದಕ್ಕೆ ಅವಕಾಶವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದನ್ನು ನೋಡಿ ನಾಳೆ ಉತ್ತರಿಸುತ್ತೇನೆ. Now the House stands adjourned to meet tomorrow at 9 a.m.

(The House adjourned at Fiftytwo Minutes past Three of the Clock to meet again tomorrow at Nine of the Clock.)